ಮಾನ್ಯ ಅಪರ ಪ್ರಥಮ ಧರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
ಬೈಲಹೊಂಗಲ

ಸಿ.ಸಿ.ನಂ.**900/2020**

ರಾಜ್ಯದ ಪರವಾಗಿ ದೊಡವಾಡ ಪೊಲೀಸ ಠಾಣೆ

ಪಿರ್ಯಾದುದಾರರು .

// ವಿರುದ್ಧ //

1) ಶಬ್ಬೀರ ಮದರಸಾಬ ನಾಯಕವಾಡಿ ಹಾಗೂ ಇತರರು

ಆರೋಪಿತರು.

ದೋಷಾರೋಪಣೆ

ನಾನು ಸುನಿಲ್ ಕುಮಾರ್ ಎಂ.ಎಸ್. ಬಿ.ಎ.ಎಲ್.ಎಲ್.ಬಿ. ಅಪರ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಬೈಲಹೊಂಗಲ ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಅಂದರೆಃ

1. ಶಬ್ಬೀರ ಮದರಸಾಬ ನಾಯಕವಾಡಿ
   ವಯಾಃ 20 ವರ್ಷ,
2. ಮದರಸಾಬ ಮೊದಿನಸಾಬ ನಾಯಕವಾಡಿ
   ವಯಾಃ 45 ವರ್ಷ,
3. ಮುಗುಟಸಾಬ ಮದರಸಾಬ ನಾಯಕವಾಡಿ
   ವಯಾಃ 26 ವರ್ಷ,
4. ಬಾಬಾಸಾಬ ಮೊದಿನಸಾಬ ನಾಯಕವಾಡಿ
   ವಯಾಃ 40 ವರ್ಷ,
5. ಮದರಸಾಬ ಇಮಾಮಸಾಬ ನಾಯಕವಾಡಿ
   ವಯಾಃ 56 ವರ್ಷ,
6. ಮೌಲಾಸಾಬ ಇಮಾಮಸಾಬ ನಾಯಕವಾಡಿ
   ವಯಾಃ 45 ವರ್ಷ,

Scanned with OKEN Scanner

7. ಸದ್ದಾಹುಸೇನ @ ಸದಾಂ ಮೌಲಾಸಾಬ ನಾಯಕವಾಡಿ
ವಯಾಃ 25 ವರ್ಷ,

8. ಸದ್ದಾಹುಸೇನ @ ಸದಾಂ ಮುದುಕಸಾಬ ನಾಯಕವಾಡಿ
ವಯಾಃ 21 ವರ್ಷ,

9. ಸಮೀರ ಬಾಬುಸಾಬ ರೆಹಮಾನಬಾಯಿ
ವಯಾಃ 20 ವರ್ಷ,

ಎಲ್ಲರೂ ಸಾಃ ಸವಟಗಿ ತಾಃ ಕಿತ್ತೂರು.

ಈ ಕೆಳಗಿನ ಆರೋಪಕ್ಕೆ ಗುರಿಪಡಿಸುತ್ತಿದ್ದೆನೆ.

ಆರೋಪಿತರಾದ ನಿಮ್ಮ ಮೇಲೆ ಅಭಿಯೋಜನೆಯವರು ಆರೋಪಿಸುವುದೇನೆಂದರೆ ದೊಡವಾಡ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಸವಟಗಿ ಗ್ರಾಮದಲ್ಲಿ ದಿ 17.04.2020 ರಂದು 19-00 ಗಂಟೆ ಸಮಯದಲ್ಲಿ 1 ನೇ ಆರೋಪಿಯಾದ ನೀವು ಮೋಟಾರ ಸೈಕಲ ಹಾಯಿಸಲು ಹೋಗಿದ್ದು ಪಿರ್ಯಾದಿಯು ಯಾಕೆ ಅಂತಾ ಕೇಳಿದ್ದಕ್ಕೆ ಆರೋಪಿತರಾದ ನೀವು ಆಸ್ತಿ ಪಾಲಿನ ಸಲುವಾಗಿ ಹಳೆ ದ್ವೇಷದಿಂದ ನೀವೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ಪಿರ್ಯಾದುದಾರರು ಹಾಗೂ ಸಾಕ್ಷಿದಾರರೊಂದಿಗೆ ಜಗಳ ತೆಗೆದು ಈ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ.143 ಸಹ ಕಲಂ.149 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

2 ನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ದೊಂಬಿ ಎಬ್ಬಿಸಿ ಪಿರ್ಯಾದಿ ಮತ್ತು ಸಾಕ್ಷಿದಾರರೊಂದಿಗೆ ಜಗಳ ತೆಗೆದು ಈ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ.147 ಸಹ ಕಲಂ.149 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

29/7

Scanned with OKEN Scanner

3 ನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ದೊಂಬಿ ಎಬ್ಬಿಸಿ ಕೈಯಲ್ಲಿ ಮಾರಕ ಅಸ್ತ್ರಗಳಾದ ಬಡಿಗೆಗಳನ್ನು ಹಿಡಿದಕೊಂಡು ಬಂದು ಪಿರ್ಯಾದಿ ಮತ್ತು ಸಾಕ್ಷಿದಾರರೊಂದಿಗೆ ಜಗಳ ತೆಗೆದು ಅವರಿಗೆ ಹೊಡೆಬಡೆ ಮಾಡಿದ್ದು ಈ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ.148 ಸಹ ಕಲಂ.149 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

4 ನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟವನ್ನು ಕಟ್ಟಿಕೊಂಡು ಬಂದು ದೊಂಬಿ ಎಬ್ಬಿಸಿ ಪಿರ್ಯಾದಿ ಮತ್ತು ಸಾಕ್ಷಿದಾರರೊಂದಿಗೆ ಜಗಳ ತೆಗೆದು, 2 ನೇ ಆರೋಪಿಯಾದ ನೀವು ಪಿರ್ಯಾದಿಗೆ ಅಡ್ಡಗಟ್ಟಿ ಹಿಡಿದುಕೊಂಡಿದ್ದು ಈ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ.341 ಸಹ ಕಲಂ.149 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

5 ನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ದೊಂಬಿ ಎಬ್ಬಿಸಿ ಪಿರ್ಯಾದಿ ಮತ್ತು ಸಾಕ್ಷಿದಾರರೊಂದಿಗೆ ಜಗಳ ತೆಗೆದು 4 ಮತ್ತು 5 ನೇ ಆರೋಪಿತರಾದ ನೀವು ಪಿರ್ಯಾದಿಗೆ ಕೈಯಿಂದ ಬಡಿದು ಸಾದಾ ಗಾಯಪಡಿಸಿದ್ದು ಈ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ.323 ಸಹ ಕಲಂ.149 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

6 ನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ದೊಂಬಿ ಎಬ್ಬಿಸಿ ಪಿರ್ಯಾದಿ ಮತ್ತು ಸಾಕ್ಷಿದಾರರೊಂದಿಗೆ ಜಗಳ ತೆಗೆದು ಆರೋಪಿತರಾದ ನೀವು

29/7

Scanned with OKEN Scanner

ರವರಿಗೆ ಬಡಿದು ಸಾದಾ ಬಡಿಗೆಯಿಂದ ಪಿರ್ಯಾದಿಗೆ ಚಾಸಾ-9 ಮತ್ತು 10 ರವರಿಗೆ ಬಡಿದು ಸಾದಾ ಗಾಯಪಡಿಸಿದ್ದು ಈ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ.324 ಸಹ ಕಲಂ.149 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

7 ನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ದೋಂಬಿ ಎಬ್ಬಿಸಿ ಪಿರ್ಯಾದಿ ಮತ್ತು ಸಾಕ್ಷಿದಾರರೊಂದಿಗೆ ಜಗಳ ತೆಗೆದು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗವನ್ನುಂಟು ಮಾಡಿದ್ದು ಈ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ.504 ಸಹ ಕಲಂ.149 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ದೋಂಬಿ ಎಬ್ಬಿಸಿ ಪಿರ್ಯಾದಿ ಮತ್ತು ಸಾಕ್ಷಿದಾರರೊಂದಿಗೆ ಜಗಳ ಅವರಿಗೆ ಜೀವದ ಧಮಕಿ ಹಾಕಿ ಈ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ.506 ಸಹ ಕಲಂ.149 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

29/7

ಅ.ಪ್ರ.ದ.ನ್ಯಾದಂ.ಬೈಲಹೊಂಗಲ

ಪ್ರಶ್ನೆ 1. ಈ ಮೇಲಿನ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೇ?

ಉತ್ತರ. ಆ-1 ರಿಂದ 9

Scanned with OKEN Scanner

ಪ್ರಶ್ನೆ2.ಈ ಮೇಲಿನ ಅಪಾಧನೆಯನ್ನು ನೀವು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯನ್ನು ನಡೆಸುವಿರಾ?

ಉತ್ತರ.ಆ-1 ರಿಂದ 9

(ಈ ಮೇಲಿನ ದೋಷಾರೋಪಣೆ ಸಾರಾಂಶವನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಈ ದಾಖಲೆಯು ಆರೋಪಿತರು ನೀಡಿದ ನಿಜವಾದ ಮತ್ತು ಅವರ ಪೂರ್ಣವಾದ ಹೇಳಿಕೆಯನ್ನು ಒಳಗೊಂಡಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.)

ದಿನಾಂಕ.29.07.2021

ಅ.ಪ್ರ.ದ.ನ್ಯಾದಂ.ಬೈಲಹೊಂಗಲ

Scanned with OKEN Scanner